# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

ಓ.ಎಸ್ ಸಂಖ್ಯೆ.**858/*2022***  ಪಿ.ಡಬ್ಲೂ .2

ದಿನಾಂಕಃ 05-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದಃ-

ಪ್ರತಿವಾದಿಯನ್ನು ನೋಡಿದ್ದೇನೆ. ನಾನು ಪ್ರತಿವಾದಿಯ ಗಂಡ ನಾರಾಯಣ ಸ್ವಾಮೀರವರವನ್ನು ಕಛೇರಿಯಲ್ಲಿ ನೋಡಿದ್ದೇನೆ ಪಡಿಚಯ ಇಲ್ಲ. ನಾನು ನಾರಾಯಣ ಸ್ವಾಮೀ ರವರ ವಿರುದ್ಧ ವಾದಿಯ ಪರವಾಗಿ ಯಾವುದೇ ಹೇಳಿಕೆ ನೀಡಿಲ್ಲ. ನಾನು ರಾಳಕುಂಟೆ ಗ್ರಾಮದ ವಾಸಿ. ನಾನು ಕೆ.ಜಿ.ಎಫ್ ನ್ಯಾಯಾಲಯದಲ್ಲಿ ನಾರಾಯಣ ಸ್ವಾಮೀ ರವರ ವಿರುದ್ಧ ವಾದಿಯ ಪರವಾಗಿ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ನೆನಪಿಲ್ಲ. ನಾನು ಆ ರೀತಿ ಹೇಳಿಕೆ ನೀಡಿದ್ದರು ಸಹ ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ, ಪ್ರತಿವಾದಿ, ನಾರಾಯಣ ಸ್ವಾ ಮೀ ಮತ್ತು ವಾದಿಯ ಮಗನ ನಡುವೆ ಚೆಕ್ಕು ಪ್ರಕರಣಗಳು ನಡೆಯುತ್ತಿವೆ ಎಂದರೆ ಗೊತ್ತಿಲ್ಲ.

ವಾದಿ ಲೇವಾ ದೇವಿ ವ್ಯವಹಾರಗಳನ್ನು ಎಷ್ಟು ವರ್ಷಗಳಿಂದ ಮಾಡುತ್ತಿದ್ದಾರೆಂದರೆ ಗೊತ್ತಿಲ್ಲ. ವಾದಿ ಮತ್ತು ನಾನು ಸಂಬಂಧಿಕರು. ನಿಪಿ. 1 ರ ಕರಾರು ಆಗುವ ಕಾಲಕ್ಕೆ ದಾವಾ ಆಸ್ತಿಯು ಹೊಸದಾಗಿ ಖಾತೆ ಆಗಿತ್ತು ಎಂದರೆ ಗೊತ್ತಿಲ್ಲ. ಪೋಡಿ ಆಗಬೇಕು ಎಂದು ಹೇಳಿದ್ದರು. ಸದರಿ ವಿಚಾರವನ್ನು ವಾದಿ, ಪ್ರತಿವಾದಿ ಮತ್ತು ನಾರಾಯಣಸ್ವಾ ಮೀ ಹೇಳಿದ್ದರು. ಕರಾರು ಪತ್ರ ಆಗುವ ಸಮಯಕ್ಕೆ ದಾವಾ ಆಸ್ತಿ ಪೋಡಿಯಾಗಿ ಪ್ರತ್ಯಕ ಖಾತೆ ಆಗಿದ್ದರು ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯ ನಡುವೆ ಲೇವಾ ದೇವಿ ವ್ಯವಹಾರ ನಡೆದಿರುತ್ತದೆ ಎಂದರೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.